ಕರ್ನಾಟಕ ಸರ್ಕಾರ

ಸಂ:ಗ್ರಾಅಪ/121/ಗ್ರಾನೀಸ(4)2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:04.01.2013.

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಅತೀ ಜರೂರು

ಇವರಿಗೆ,
ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,

ಮಾನ್ಯರೆ,

ವಿಷಯ: ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಸಾರ್ವಜನಿಕ ಸಹಾಯವಾಣಿ ಕೇಂದ್ರ (ಜಲಸೇವಾ ನಿಯಂತ್ರಣ ಕೇಂದ್ರ)ದಲ್ಲಿ ಸ್ವೀಕರಿಸಲಾಗುವ ದೂರುಗಳ ಶೀಘ್ರ ವಿಲೇವಾರಿ ಹಾಗೂ ಮಾಹಿತಿ ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾ.ಅ.ಪ/121/ಗ್ರಾ.ನೀ.ಸ(4)2011, ದಿ:28.09.2011.
2. ಸರ್ಕಾರದ ಪತ್ರ ಸಂಖ್ಯೆ;ಗ್ರಾ.ಅ.ಪ/121/ಗ್ರಾ.ನೀ.ಸ(4)2011, ದಿ:29.10.2011 ಮತ್ತು 3.2.2012

--------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಸಾರ್ವಜನಿಕರಿಂದ ಬರುವ ಅಹವಾಲು/ದೂರುಗಳನ್ನು ಸ್ವೀಕರಿಸುವ ಸಲುವಾಗಿ ಜಲಸೇವಾ ನಿಯಂತ್ರಣ ಕೇಂದ್ರಗಳನ್ನು (Control Room) ತೆರೆಯುವಂತೆ ಸರ್ಕಾರದಿಂದ ಈ ಹಿಂದೆಯೇ ನಿರ್ದೇಶನಗಳನ್ನು ನೀಡಿರುವುದು ಸರಿಯಷ್ಟೇ. ಅದರಂತೆ ರಾಜ್ಯದ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಒಟ್ಟು 177 ಜಲಸೇವಾ ನಿಯಂತ್ರಣ ಕೇಂದ್ರಗಳನ್ನು ತೆರೆದಿರುವ ಬಗ್ಗೆ ಮಾಹಿತಿ ಲಭ್ಯವಿರುತ್ತದೆ.

ಉಲ್ಲೇಖದ ಪತ್ರದಲ್ಲಿ ನೀಡಲಾದ ಸೂಚನೆಯಂತೆ ಸದರಿ ಕೇಂದ್ರಗಳಲ್ಲಿ ಸ್ವೀಕರಿಸಲಾಗುವ ದೂರುಗಳು ಮತ್ತು ಅವುಗಳ ವಿಲೇವಾರಿ ಸಂಬಂಧ **ಪ್ರತೀ ಶುಕ್ರವಾರ** ಜಿಲ್ಲಾ ಮಟ್ಟದಲ್ಲಿ ಮಾಹಿತಿ ಕ್ರೋಢೀಕರಿಸಿ ಪ್ರಗತಿ ವರದಿಯನ್ನು **ಇ-ಮೇಲ್/ಫ್ಯಾಕ್ಸ್** ಮೂಲಕ ಸರ್ಕಾರಕ್ಕೆ ಸಲ್ಲಿಸುವಂತೆ ಸ್ಪಷ್ಟ ಸೂಚನೆ ನೀಡಿದ್ದರೂ ಸಹ ಕೇವಲ ಕೆಲವೇ ಜಿಲ್ಲೆಗಳಿಂದ ಮಾತ್ರ ಮಾಹಿತಿ ಸ್ವೀಕೃತಿಯಾಗುತ್ತಿದೆ ಇದರಿಂದ, ಸರ್ಕಾರದ ಮಟ್ಟದಲ್ಲಿ ಸಮರ್ಪಕ ಪರಿಶೀಲನೆಗೆ ತೊಡಕಾಗಿದೆ.

ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯು ಬರುವ ಮುಂಗಾರುತನಕ ಮುಂದುವರೆಯಲಿದ್ದು, ಕುಡಿಯುವ ನೀರಿನ ಸಮಸ್ಯೆ ಈ ಬೇಸಿಗೆಯಲ್ಲಿ ಇನ್ನೂ ಉಲ್ಬಣಗೊಳ್ಳುವ ಸಾಧ್ಯತೆಗಳಿವೆ. ಆದ್ದರಿಂದ ಈಗಾಗಲೇ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಲಸೇವಾ ಕೇಂದ್ರಗಳನ್ನು ಬಲಪಡಿಸುವ ಹಾಗೂ ಸಾರ್ವಜನಿಕರ ಆಹವಾಲುಗಳಿಗೆ ಸ್ಪಂದಿಸುವ ಕಾರ್ಯ ತ್ವರಿತಗತಿಯಲ್ಲಿ ನಿರ್ವಹಿಸಬೇಕಾಗಿದ್ದು, ಇದಕ್ಕಾಗಿ ಎಲ್ಲಾ ರೀತಿಯ ಮುನ್ನೆಚ್ಚರಿಕೆ ಹಾಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕೋರಿದೆ. ಅಂತೆಯೇ ಸ್ವೀಕರಿಸುವ ದೂರು ಮತ್ತು ವಿಲೇವಾರಿ ಕುರಿತಂತೆ **ಪ್ರತಿ ಶುಕ್ರವಾರ** ನಿಗಧಿತ ನಮೂನೆಯಲ್ಲಿ ಪ್ರಗತಿವರದಿಗಳನ್ನು ಸರ್ಕಾರಕ್ಕೆ ಕಡ್ಡಾಯವಾಗಿ **ಇ-ಮೇಲ್ (rk3452000@yahoo.co.in) / ಫ್ಯಾಕ್ಸ್ ಸಂಖ್ಯೆ: 08022340655 / 22203175** ಹಾಗೂ CE/PRED ಗೆ ಸಲ್ಲಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

3/1/2013

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:**

1. ಮುಖ್ಯ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ನಂ.55, 4ನೇ ಮಹಡಿ, ಅಭಯ ಸಂಕೀರ್ಣ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20. ಇವರ ಮಾಹಿತಿಗಾಗಿ ಹಾಗೂ ಸೂಕ್ತ ಜರೂರು ಕ್ರಮ ವಹಿಸಲು ಕೋರಿದೆ. ಪ್ರತಿ ಮಾಹೆ ಸ್ವೀಕೃತ ದೂರುಗಳು ಹಾಗೂ ಪರಿಹಾರ ಒದಗಿಸಿದ ಪ್ರಕರಣಗಳ ಜಿಲ್ಲಾವಾರು ತಃಖ್ತೆಯನ್ನು ಸರ್ಕಾರಕ್ಕೆ ನೀಡಲು ಕೋರಿದೆ.
2. ರಾಜ್ಯದ ಎಲ್ಲಾ(8) ಅಧೀಕ್ಷಕರು ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬೆಂಗಳೂರು, ಇವರ ಮಾಹಿತಿಗಾಗಿ ಮತ್ತು ಸೂಕ್ತ ಜರೂರು ಕ್ರಮಕ್ಕಾಗಿ ಕಳುಹಿಸಿದೆ.
3. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು ಇವರ ಮಾಹಿತಿಗಾಗಿ ಮತ್ತು ಸೂಕ್ತ ಜರೂರು ಕ್ರಮಕ್ಕಾಗಿ ಕಳುಹಿಸಿದೆ.
4. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಕಾರಿಗಳ ಮಾಹಿತಿಗಾಗಿ ಮತ್ತು ಸೂಕ್ತ ಜರೂರು ಕ್ರಮಕ್ಕಾಗಿ ಕಳುಹಿಸಿದೆ.